Regd. No. M. 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಪ್ರತಿ ೩ ಪೈ.

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—0

ಸಂಪುಟ ೭] ಮೈಸೂರು, ಮಂಗಳವಾರ, ೧೪ ನೆ ಜುಲೈ ೧೯೨೫. [ಸಂಚಿಕೆ ೨೯

ಕಲಾಮಂದಿರಂ, ಬೆಂಗಳೂರು ಸಿಟಿ

ಕ ಲಾ ಭ್ಯಾ ಸ

ಒಂದು ವರ್ಷದಲ್ಲಿ ಸ್ವತಂತ್ರವಾಗಿ ಜೀವನಮಾಡಲು ಸಮರ್ಥರಾಗುವಿರಿ.

ವಿದ್ಯಾರ್ಥಿ ವೇತನ ೩ ರಿಂದ ೭ ರೂಪಾಯಿನವರಿಗೆ

೧ ಇದೇ ಜುಲೈ ೧ ನೆ ತಾರೀಖಿನಿಂದ ಒಂದು ವರ್ಷ ಕಾಲ

೨ ವಿದ್ಯಾರ್ಥಿಗಳು ೧೩ ವರ್ಷಕ್ಕೆ ಮೇಲ್ಪಟ್ಟ ೨೫ ರ ವಳಗೆ ಇರತಕ್ಕದ್ದು ಮತ್ತು ಕನ್ನಡ ೩ ನೇ ತರಗತಿಯವರಿಗಾದರೂ ವ್ಯಾಸಂಗಮಾಡಿರತಕ್ಕದ್ದು.

೩ ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಮೈಸೂರು, ಬೆಂಗಳೂರು ಪಟ್ಟಣಗಳಿಂದಲೂ ಇಬ್ಬಿಬ್ಬರನ್ನು ಆರಿಸಿಕೊಳ್ಳುವೆವು

೪ ಪ್ರತಿ ವಿದ್ಯಾರ್ಥಿಯೂ ಪ್ರಾರಂಭದಲ್ಲಿ ೫೦ ರೂಪಾಯಿಗಳನ್ನು ಕೊಡತಕ್ಕದ್ದು

—ಬೋಧಿಸುವ ಅಂಶಗಳು—

೧ ಡ್ರಾಯಿಂಗ್, ಪೈಯಿಂಟಿಂಗ್, ಸ್ಕೆಚ್ಚಿಂಗ್.

೨ ಬೋರ್ಡು ಬರೆಯುವದು, ಸ್ಕ್ರೀನುಗಳನ್ನು ಬರೆಯವುದು.

೩ ಮನೆಗಳಿಗೆ ಬಣ್ಣವನ್ನು ಹಾಕುವದು. ಮತ್ತು ಅಲಂಕಾರಮಾಡುವುದು.

೪ ಫೋಟೋ ತೆಗೆಯುವದು. ಎಲಾರ್ಜ್ ಮಾಡುವುದು

೫ ಹತ್ತಿಯನ್ನು ಸಿದ್ಧಮಾಡಿಕೊಂಡು ನೂಲುವುದು,

ಮುಂತಾದ ಇನ್ನೂ ಅನೇಕ ಕೈಕಸಬನ್ನೂ ಕಲಿಸಿ ಕೊಡುವೆವು.

ಎ. ಎಸ್. ಸುಬ್ಬರಾವ್
ಆರ್ಟಿಸ್ಟ್

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಧೂಪದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಪ್ರಮೆಯಾಗಿಯೂ, ಪದಾರ್ಥಗಳು ನಂಬಿಕೆಯಾಗಿ ಇರುತ್ತವೆ. ಅಪೇಕ್ಷಿಸುವವರು ತರಿಸಿಕ್ಕೊಳ್ಳ ಪ್ರಾರ್ಥನೆ. [22-5]

ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿಗಳು, ಮೈಸೂರು

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದು ಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು,

Rosehead Necklaces

ಮುತ್ತಿನ ಕಂಠೀಹಾರಗಳು

ಈ ಮುತ್ತುಗಳು ಚೆನ್ನಾಗಿ ಹೊಳಪುಳ್ಳವುಗಳಾಗಿವೆ. ನೋಡಲು ಅತಿ ಸುಂದರವಾಗಿವೆ. ಇವನ್ನು ನಿಜವಾದ ಅಥವ ಇಮಿಟೇಷನ್ ಮುತ್ತುಗಳೊಡನೆ ಹೋಲಿಸಿ ನೋಡಿ, ಒಳ್ಳೇ ಮುತ್ತುಗಳಿಗಿಂತ ಕೀಳೆಂದುತೋರಿದರೂ, ಇಮಿಟೇಷನ್ ಮುತ್ತುಗಳಿಗಿಂತ ಉತ್ತಮವಲ್ಲವೆಂದು ತೋರಿದರೂ ೮ ದಿನಗಳೊಳಗೆ ವಾಪ್ಸು ಮಾಡದಲ್ಲಿ. ನಿಮ್ಮ ಹಣ ವಾಪ್ಸುಮಾಡಲಾಗುವುದು ಚಿನ್ನದ ಕೊಂಡಿಗಳಿಂದ ಸೇರಿಸಿರುವ ೧೮ ಅಂಗುಲದ ಈ ಹಾರವನ್ನು ವಿ. ಪಿ. ಮೂಲ್ಕ ೮ ರೂಪಾಯಿಗಳಿಗೆ ಸರವನ್ನಿಡಲು ಒಂದು ಅಂದವಾದ ಪೆಟ್ಟಿಗೆಯನ್ನು ಉಚಿತವಾಗಿ ಕೊಡಲಾಗುತ್ತೆ. ಕೆಲವು ಮಾತ್ರ ಮಿಕ್ಕೆವೆ ಅನೇಕ ಮಾದರಿಯಲ್ಲಿಯೂ ವಿವಿಧ ಬಣ್ಣದ್ದಾಗಲಿ, ಸುವಾಸಿದವಾಗಿಯೂ ಇದೆ. ಕಗ್ಗತ್ತಲೆಯಲ್ಲಿಯೂ ಹೊಳೆಯುತ್ತದೆ. ಒಡವೆ ಜೊತೆಗೆ ಒಂದು ದೀಪವೂ ಮೊದಲು ಒಂದು ವಾರದಲ್ಲೇ ೨೨೦೦ ಕ್ಕೆ ಮೇಲ್ಪಟ್ಟು ಖರ್ಚಾಗಿದೆ. 14-7

'ಅಪ್ಪೊ' ಅಲ್ಯೂಮಿನಿಯಂ ಸೋಪು'

ಯೂಲೇಪಿನ ಒಂದು ದೊಡ್ಡ ಕಾರ್ಖಾನೆಯಲ್ಲಿ ತಯಾರಾದ ಈ ಸಾಬೂನುಗಳು ಕೊಳೆಯಾದ ಅಲೂಮಿನಂ ಪಾತ್ರೆಗಳನ್ನು ತೊಳೆದು ಹೊಳೆಯುವಂತೆ ಮಾಡುತ್ತದೆ. ಒಂದು ಪೆಟ್ಟಿಗೆಯು ೧೦೦ ಪಾತ್ರೆಗಳನ್ನು ತೊಳೆಯಲು ಬರುತ್ತೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಉಪಯೋಗಿಸಲ್ಪಡುತ್ತಿದೆ.

ಕ್ರಯ ದೊಡ್ಡ ಪೆಟ್ಟಿಗೆ ೧ಕ್ಕೆ ರೂ ೧—೪—೦
ಚಿಕ್ಕ ಪೆಟ್ಟಿಗೆ ೧ಕ್ಕೆ ರೂ ೦—೧೦—೦

ಸೋಪಿಗೆ ಆರ್ಡರ್ ಕೊಡುವವರು ಪೂರ್ತಾ ಹಣವನ್ನು ಮುಂಗಡವಾಗಿ ರವಾನಿಸಬೇಕು.

Agencia Mercantil-y-Maritima,
INTERNATIONAL BUILDINGS,
LUDHIANA (Punjab)

Never too late to mend

Ghe past, present and future Dictator

The wonderful mechanism of man here explained. Your future once more, why that beginning, wherefore this rise and fall the what of the next DO CONSULT. This astrologer determines all about your life before the curtain drops. The all is the research study of that beginning, the inductive and unique advisory of the rise and fall in current life, the what in future. This is combined in the knowledge—mature of the birth-time, the Zodaic sign commanding the planets, the constellation of star that lights the right way of life's attainment. Opportunity solicited with a hearty offer of trial.- Beware others of this proclamation are little read in the agreement of life with its visible and invisible imbeded directors. Man in his pride of presumption has neglected to maintain his own life concurrently with the invisible and visible agencies, hence, the frustrations of his attempts to success. Success is only gained by man, the man that knows equally of the visible impediments which he wards easily and the invisible which he tries to attain but neglects, Fail not, neglect not and attain your wishes as the free-will man. The win's influences are imbeded in time The doctor advises only to the outer agreement but the honest way is lacking to explain the why of the failure. The astrologer alone can explain this in its detail and win you the life's battle as easy as the doctor's medicine, which proclaims to relieve. This foreword might appeal and lead you to our Astralogical Bureau, where your all-care is explained to heart's content. The heart is the seat of divinity, the divine-wisdom-ice is broken to your swallowing adversities by bits.

Apply for the yearly, monthly, weekly, and daily predictions; particulars on enquiry

Bidare Nanjundasastry and Brother
Astrologers, PARIMALA VILAS
Mysore

ಮುಂದಿನವಾರ ಪತ್ರಿಕೆಯು ಹೊರಡುವುದಿಲ್ಲ.

"ಸತ್ಯವಾದಿ"

೧೪ನೆ ಜುಲೈ ೧೯೨೫

ಪ್ರಮುಖ ನ್ಯಾಯಸ್ಥಾನದ ಪದವೀಪ್ರಧಾನ

ನಮ್ಮ ಮೈಸೂರು ಸಂಸ್ಥಾನದ ಚೀಫ್ ಕೋರ್ಟಿನಲ್ಲಿ ಒಂದು ವಾರದೊಳಗೆ ಇಬ್ಬರು ಜಡ್ಜಿಗಳಾಗಿ ಹೋದ ವಿಷಯವು ಯಾರಿಗೆ ತಾನೇ ತಿಳಿಯದು! ಆದರೂ ವಿಲಕ್ಷಣ ರೀತಿಯಲ್ಲಿ ನಡೆದುದಾಗಿದೆಯೆನ್ನ ಬಹುದು:

ಇದೇ ಇಸವಿ ಜುಲೈ ಮೊದಲಿನಿಂದ ನಿವೃತ್ತರಾದ ಜಡ್ಜ್ ಮ|| ಬಿ ಸುಬ್ಬಣ್ಣನವರ ಸ್ಥಾನಕ್ಕೆ ಹಠಾತ್ತಾಗಿ 'ಬಾರ್' ನೊಳಗಿನ ಮ|| ದೊರಸ್ವಾಮಿ ಐಯರನ್ನು ಸರಕಾರವು ನೇಮಕಮಾಡಿತು. ಮ|| ಅಯ್ಯರವರಾದರೂ ಮೇಲೆಕಂಡ ಪದವಿಗೆ ಸರ್ವತೋಮುಖವಾಗಿ ಅರ್ಹರೇ ಆಹುದು. ಆದರೆ, ಮಾದರೀ ಸಂಸ್ಥಾನದ ಜನವು ಇವರ ಆಗಮನವನ್ನು ನಿರೀಕ್ಷಿಸಿರಲಿಲ್ಲವೆನ್ನ ಬಹುದು. ಸರಕಾರದ 'ಸರ್ವಿಸ್', 'ಜೂನಿಯಾರಿಟಿ' 'ಸೀನಿಯಾರಿಟಿ', 'ಕ್ವಾಲಿಫಿಕೇಷನ್' ನಿಯಮನವನ್ನು ಸರಿಸಿ, ಮೇಲ್ಕಂಡ ಪದವಿಯು ಯಾರಿಗೆ ಬರಬೇಕಾಗಿತ್ತೋ, ಅದು ತಪ್ಪಿ, ಜನನಿರೀಕ್ಷಣೆಗೆ ಭಂಗಬಂದಿತೆಂಬುದೂ ಸ್ಪಷ್ಟವಾದ ವಿಷಯವಾಗಿಧೆ.

ನ್ಯಾಯವಾಗಿ, ಸ್ವಾಭಾವಿಕವಾಗಿ ನೋಡುತ್ತಾ ಹೋದರೆ, ಮ|| ಜಿ. ಶ್ರೀನಿವಾಸಯ್ಯರವರು ಆ ಸ್ಥಾನವನ್ನು ಪಡೆಯಬೇಕಾಗಿದ್ದಿತು. ಸರ್ವಥಾ ಅವರು ಆ ಸ್ಥಳಕ್ಕೆ ಅರ್ಹರಾಗಿರುವವರೆಂದರೆ ಅತಿಶಯೋಕ್ತಿಯಲ್ಲ. ಅವರ ವಿನ ಸಂಸ್ಥಾನದಲ್ಲಿ ನ್ಯಾಯಶಾಸ್ತ್ರದ (ಎಂ ಎಲ್.) ಪರೀಕ್ಷೆಯಲ್ಲಿ ತೀರ್ಗಡೆಯಾಗಿರುವ ನ್ಯಾಯಮೂರ್ತಿಗಳು ಮತ್ತೊಬ್ಬರಿಲ್ಲ. ಇವರು ಲೆಜಿಸ್ಲೇಟಿವ್ ಇಲಾಖೆಯಲ್ಲಿಯೂ ಕೆಲಸಮಾಡಿರುತ್ತಾರೆ ಚೀಫ್ ಕೋರ್ಟಿನ ರೆಜಿಸ್ಟ್ರಾರರಾಗಿಯೂ ಇದ್ದರು. ಈಗ ಫಸ್ಟ್ ಕ್ಲಾಸ್ ಡಿಸ್ಟ್ರಿಕ್ಟ್ ಜಡ್ಜಿ ಪದವಿಯನ್ನಲಂಕರಿಸುತ್ತಿರುವರು. ಅಂದರೆ, ಇವರಿಗೆ ಪ್ರಮುಖ ನ್ಯಾಯಾಧೀಶರಾಗಲೂ ಕೂಡ ಸಮಸ್ತ ಗುಣಗಳಿಂದಲೂ, ಅನುಭವದಿಂದಲೂ ವಿದ್ವತ್ತಿಯಿಂದಲೂ ಕೂಡಿದವರಾಗಿರುತ್ತಾರೆ. ಇಂತಹವರ ನ್ಯಾಯವಾಗಿ ಪಡೆಯಬೇಕಾದ ಪದವಿಯಿಂದ ವಂಚಿತರಾದುದು ಪರಮಾಶ್ಚರ್ಯವೂ ವಿಶಾದಕರವೂ ಆಗಿರದೆ ಇರದು! ಮುಂದಿನ ಸಮಯದಲ್ಲಿ ದೊರೆಯಬಹುದೇನೋ ಎಂದು ನೋಡುವಲ್ಲಿ—

ಪರೀಕ್ಷೆಗಾಗಿಯೇ ಎಂಬಂತೆ ಒಂದು ವಾರದಲ್ಲೇ ಚೀಫ್ ಕೋರ್ಟಿನ ಜಸ್ಟಿಸ್‌ರಾದ ಮ|| ಕೆ. ರಾಮಸ್ವಾಮೈಂಗಾರ್ಯರು ದಿವಂಗತರಾದರು. ಕಾಲನ ಲೀಲೆಯನ್ನು ಕಂಡವರಾರು? ಅವರ ನಿಧನದಿಂದ ದೇಶಕ್ಕೇ ದೊಡ್ಡ ತೊಂದರೆ ಮತ್ತು ನಷ್ಟವಾದುದೇನೋ ನಿಜ! ವಿಧಿಯನ್ನು ಎದುರಿಸಬಲ್ಲವರಾರು?

ಈ ಸಂದರ್ಭದಲ್ಲಿಯಾದರೂ ಮ|| ಜಿ. ಶ್ರೀನಿವಾಸ್ಯೆಯ್ಯರ್‌ರವರು ಚೀಫ್‌ಕೋರ್ಟಿನಲ್ಲಿ ಸ್ಥಾನವನ್ನು ಹೊಂದಲಿಲ್ಲ. ಆಸ್ಥಾನವು ಮ|| ಡಿ. ಕೆ. ರಾಮರಾಯರಿಗೆ ದೊರೆಯಿತು. ಇದನ್ನು ನೋಡಿದರೆ ಜನ ತಾನೊಂದು ನೆಸೆದರೆ ದೈವ ಬೇರೊಂದೆಣಿಸಿತು ಎಂಬ ಆರ್ಯವಾಕ್ಯವು ನಿಜವೇ ಸರಿ!

ಈ ವಿಷಯದಲ್ಲಿ ನಾವು ಸರಕಾರದಮೇಲೆ ಯಾವ ರೀತಿಯಾದ ಸಮಾಲೋಚನೆಯನ್ನೂ ಮಾಡಲಿಚ್ಛಿಸುವುಳ್ಳವರಾಗಿಲ್ಲ; ಮತ್ತು ನಾವು ಮ|| ಜಿ. ಶ್ರೀನಿವಾಸ್ಯೆಯ್ಯರ್‌ರವರ ಪರ ವಹಿಸಿರುವುದೂ ಇಲ್ಲ. ಮೇಲಾಗಿ ಈಗ ನಿಯಮಿತರಾಗಿರುವವರೂ ಸಾಮಾನ್ಯರಲ್ಲ. ಪದವಿಗೆ ತಕ್ಕ ಪ್ರತಿಷ್ಠಾಭೂತರೇ ಆಹುದು! ಮತ್ತು ಇವರನ್ನು ನಿಯಮಿಸಿರುವುದರಲ್ಲಿ ನಮ್ಮ ಸರಕಾರದವರು ಚತುರತೆಯನ್ನು ತೋರಿಸಿಧವರೆಂದೂ ಊಹಿಸದಿರಲಾರೆವು. ಆದರೆ "ಸರಕಾರದವರು ತಮ್ಮ ಹುದ್ದೇದಾರರ ನ್ಯಾಯವಾದ ಹಕ್ಕುದಾರಿಕೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಇರದಿರಬಾರದೆಂಬುದೇ ಈ ಲೇಖನದ ಮುಖ್ಯೋದ್ದೇಶವು.

ಪ್ರಾಯಶಃ ಮ|| ಶ್ರೀನಿವಾಸ್ಯೆಯ್ಯರ್‌ರವರ ಬುದ್ಧಿಕುಶಲತೆಯನ್ನು, ಈ ಪದವಿಗಿಂತ ರಾಜ್ಯಾಡಳಿತದ ಇಲಾಖೆಯ ಉತ್ತಮವಾದ ಬೇರೊಂದು ಪದವಿಯು ನಿರೀಕ್ಷಿಸುತ್ತಿರಬಹುದೆಂದು ಅಲ್ಲಲ್ಲಿ ಕೇಳಿಬರುತ್ತಿರುವ ಗುಸುಗುಸು ಮಾತನ್ನು ನಂಬಿ ಮುಂದೇನಾಗುವುದೆಂಬುದನ್ನು ನಿರೀಕ್ಷಿಸುತ್ತೇವೆ.

ದೇಶಬಂಧು ದಾಸರ ಮರಣ ವಿಷಯದಲ್ಲಿ ಅವರ ಪತ್ನಿ ವಸಂತಾದೇವಿಯವರಿಗೆ ಶ್ರೀಮತಿ ಸರೋಜಿನಿಯವರ ಅನುತಾಪ ಪತ್ರ

ಪ್ರಿಯ ಸಖಿ ವಸಂತಿ!

ಚಿಕ್ಕಂದಿನಿಂದ ನಾವೆಲ್ಲರೂ ಕಲೆತು ಆಡಿಕೊಳ್ಳುತ್ತಿದ್ದೆವು. ಈ ದುಃಖ ಸಮಯದಲ್ಲಿ ನಿನಗೆ ಕಾಗದವನ್ನು ಬರೆಯಬೇಕೆಂದು ಅನೇಕವೇಳೆ ಪ್ರಯತ್ನಿಸಿ ಕೆಲವು ಪಂಗ್ತಿಗಳನ್ನು ಬರೆದು ಹರಿದುಹಾಕುತ್ತಿದ್ದೆನು. ದುಃಖಶಾಂತಿಕರಗಳಾದ ಪದಗಳೇ ನನಗೆ ದೊರೆಯುತ್ತಿರಲಿಲ್ಲ. ನಿನ್ನ ಪತಿಯ ಮರಣಕ್ಕಾಗಿ ನೀನೊಬ್ಬಳೇ ಚಿಂತಿಸಬೇಕಾದ ದುರವಸ್ಥೆ ನಿನಗೆ ಉಂಟಾಗಿಲ್ಲ. ನಿನ್ನ ಪತಿಯು ಮಹಾರಾಜನು. ನೀನು ಮಹಾರಾಣಿಯು ನಿನ್ನ ಪತಿಯ ಮರಣಕ್ಕಾಗಿ ೩೩ ಕೋಟಿ ಮಂದ ಭಾರತೀಯರೂ ದುಃಖದಲ್ಲಿ ಮುಣುಗಿರುತ್ತಾರೆ. ಆದ್ದರಿಂದಲೇ ನಿನಗೆ ಸ್ವಲ್ಪ ಅನುಕೂಲವುಂಟು.

ಚಿತ್ತೋದಾದಾ (ದಾಸರ) ನ್ನು ನಾನು ಮಹಾರಾಜನೆಂತಲೇ ಕರೆಯುತ್ತೇನೆ. ಬಾಲ್ಯದಲ್ಲಿ ನಾನು ಅವರನ್ನು ಹಾಗೆಯೇ ಕರೆಯುತ್ತಿದ್ದೆನು. ಸಹೋದರ ಪ್ರೀತಿಸುವಂತೆಯೇ ಪ್ರೀತಿಸುತ್ತಿದ್ದೆನು. ನನ್ನ ಸಂತಾಪವನ್ನು ಪ್ರಪಂಚಕ್ಕೇ ಪ್ರಕಟಗೊಳಿಸುವದಕ್ಕಾಗಿ ಈಗಾಗಲೇ ಒಂದು ಲೇಖನವನ್ನು ಪ್ರಕಟಿಸಿರುತ್ತೇನೆ. ಅದನ್ನು ನೀನೂಕೂಡಾ ನೋಡಿಯೇ ಇರಬಹುದು ಅತನ ಸ್ವಭಾವವು ದೇಶಸೇವೆಯಲ್ಲಿದ್ದುದಕ್ಕಿಂತ ಹೆಚ್ಚಾಗಿ ಬಂಧುಮಿತ್ರಸಮಕ್ಷಮದಲ್ಲಿ ಇದ್ದಿತೆಂದು ಜೆನ್ನಾಗಿ ವಿದಿತವಾಗುತ್ತಲಿದ್ದಿತು. ದೇಶಸೇವೆಯಲ್ಲಿ ಆತನು ತೋರಿಸಿದ ಧೈರ್ಯವೂ, ತ್ಯಾಗವೂ, ದೇಶಭಕ್ತಿಯೂ ಚರಿತ್ರಾಂಶಗಳೂ ಚಿರಸ್ಮರಣೀಯಗಳೂ ಆಗಿರುತ್ತವೆಯಲ್ಲವೇ! ಆತನ ಮೃದುಲ ಸ್ವಭಾವವೂ, ಆದರಣೀಯ ಔದಾರ್ಯವೂ, ಸೌಜನ್ಯವೂ, ವಾಕ್ಚಾತುರ್ಯವೂ, ಸಮಯ ಸ್ಫೂರ್ತಿಯೂ, ಕವಿತ್ವಸಂಪದವೂ, ಪ್ರಕೃತಸೌಂದರ್ಯಪ್ರಿಯತ್ವವೂ, ಆಸ್ತಿಕತೆಯೂ, ಸರ್ವೇವೃಷ್ಣವಸಹಜ ಹರಿಭಕ್ತಿಯೂ, ಅಂತರಂಗಿಕರಿಗೆ ಹೊರ್ತು ಇತರರಿಗೆ ಸರಿಯೂಗಿ ತಿಳಿಯಲವಕಾಶವಿಲ್ಲ. ಅದನ್ನು ಗ್ರಹಿಸತಕ್ಕ ಭಾಗ್ಯವು ನನಗೆ ಲಭಿಸಿರುವದರಿಂದ ಅಷ್ಟು ಸುಗುಣಖನಿಯು ಈರೀತಿ ಕಾಲವೃತ್ಯುವಿನ ಪಾಲಾದುದಕ್ಕಾಗಿ ದುಃಖಾಂಬುಧಿಯಲ್ಲಿ ಮುಣಗಿರುತ್ತೇನೆ. ಕವಿಸಹಜವಾದ ಭಾವನೆ, ಧೀರಸಹಜವಾದ ಕಾರ್ಯನಿರತೆ ಕರ್ಮಯೊಗ, ವೈರಾಗ್ಯ ಇವಿಷ್ಟೂ ಅತನಲ್ಲಿ ಏಕೀಭವಿಸಿದ್ದವು ಕವಿಸಹಜವಾದ ಧೀಶಕ್ತಿಯು ಕಾರ್ಯಮುಖವಾಯಿತು. ಧೀಶಕ್ತಿಗೆ ಭಾವನಾಶಕ್ತಿಯೂ, ಧೈರ್ಯಕ್ಕೆ ನಿರತೆಯೂ, ಆತ್ಮವಿಶ್ವಾಸಕ್ಕೆ ದೂರದೃಷ್ಟಿಯೂ ಸಹಕಾರಿಗಳಾದವು.

ಅಂತಪ್ಪ ಮಹನೀಯನಿಗೆ ಅರ್ಧಾಂಗಿಯೂ, ಸಹಚರಿಯೂ, ಪ್ರೇಮಾಸ್ಪದಳೂ ಆಗಿ ಕಂಗೊಳಿಸಿದ ನಿನ್ನ ಪೂರ್ವಜನ್ಮದ ಪುಣ್ಯವು ಎಷ್ಟೋ ಘನವಾದದ್ದು. ಆಪತ್ತುಗಳಲ್ಲಿ, ಸಂಪತ್ತುಗಳಲ್ಲಿ, ಭೋಗಗಳಲ್ಲಿ, ತ್ಯಾಗಗಳಲ್ಲಿ ನೀನು ಭಾಗಗಳನ್ನು ಪಡೆದು, ನಿರಂತರದಲ್ಲಿಯೂ ನಿನ್ನ ನಿಧಿಯಲ್ಲಿದ್ದು ಸೇವೆಮಾಡಿದೆ. ಪತ್ನೀತ್ವವನ್ನು ಸಾರ್ಥಕಪಡಿಸಿ ಸ್ವಾರ್ಥತ್ಯಾಗಮಾಡಿ ಅಖಿಲ ಭಾರತಜನಗಳವಂದ್ಯಳಾದೆ. ಇಂತಹ ಆಪತ್ಸಮಯದಲ್ಲಿ ಮಹಾತ್ಮನು ನಿನ್ನ ಸನಿಹಪದಲ್ಲಿದ್ದುದು ಮತ್ತೊಂದು ದೊಡ್ಡ ಅದೃಷ್ಟವೇ ಸರಿ. ಚಿತ್ತೋದಾದ ಮರಣ ಹೊಂದುವದಕ್ಕೆ ಕೆಲವುದಿವಸಗಳಮುಂಜೆ ಮಹಾತ್ಮನು ಡಾರ್ಜಲಿಂಗಿನಲ್ಲಿ ನಿಮ್ಮ ಮನೆಯಲ್ಲಿ ಕೆಲವು ದಿವಸ ನಿಂತಿದ್ದಕ್ಕೂ ಮಹಾತ್ಮ ಮತ್ತು ದಾದಾ ಇವರಿಬ್ಬರೂ ಒಂದೆಡೆಯಲ್ಲಿ ಸೇರಿದ್ದಕ್ಕೂ ನಾನು ಬಹಳ ಸಂತೋಷಪಡುತ್ತೇನೆ. ಕೆಲವು ವಿಷಯಗಳಲ್ಲಿ ಮಹಾತ್ಮನು ಮಾತೃಸಮಾನನೇ. ಸಂತಾಪವನ್ನು ಗ್ರಹಿಸಿಕೊಳ್ಳುವದರಲ್ಲಿ ಸ್ತ್ರೀಯರಿಗಿರುವ ಅದ್ಭುತ ಶಕ್ತಿಯು ಮಹಾತ್ಮನಿಗೆ ಪೂರ್ತಿಯಾಗಿರುತ್ತದೆ. ಆತನು ದುಃಖಶಮನಕ್ಕಾಗಿ ನಡಿಸಿದರೀತಿಯು ಪ್ರಶಂಸನೀಯವಾದದ್ದು. ಈ ಸಮಯದಲ್ಲಿ ನಿನಗೆ ದುಃಖಶಾಂತಿಯನ್ನು ಮಾಡಬೇಕಾದ ಕೆಲಸ ಸಂಘಟನೆಯಾದುದರಿಂದಲೇ ಮಹಾತ್ಮನಿಗೆ ಕೂಡ ದುಃಖಶಾಂತಿಯುಂಟಾಗುತಲಿದೆ.

ನನಗೆ ದೇಹಾಲಸ್ಯವುಂಟಾದ ನಿಮಿತ್ತ ವಿಶ್ರಾಂತಿ ಹೊಂದಿದುವದಕ್ಕಾಗಿ ಇಲ್ಲಿ ನಮ್ಮ ಮನೆಗೆ ಬಂದೆನು. ಶೀಘ್ರದಲ್ಲಿ ನಾನು ಜೊಂಬಾಯಿಗೆ ಪ್ರಯಾಣ ಮಾಡಬೇಕಾಗಿರುತ್ತದೆ. ಅವಕಾಶವಾದರೆ ವಂಗರಾಷ್ಟ್ರಕ್ಕೆ ಕೂಡ ಬರುತ್ತೇನೆ. ದಾದಾ ಮಾಡಬೇಕೆಂದಿದ್ದ ಕೆಲಸವನ್ನು ನೆರವೇರಿಸಬೇಕಾದ ಭಾರವು ನಮ್ಮೆಲ್ಲರ ಮೇಲೆ ಬಿದ್ದದ್ದಾಗಿರುತ್ತದೆ. ಸಾಧ್ಯವಾದಷ್ಟು ತ್ವರ್ಯದಲ್ಲಿ ಬಂದು ನಿನ್ನನ್ನು ನೋಡುತ್ತೇನೆ. ನೀನು ನಿರಾಶಳಾಗ ತಕ್ಕವಳಲ್ಲವೆಂತಲೂ, ಧೈರ್ಯವನ್ನಿ ವಿಶ್ವಾಸವನ್ನು ಹೊಂದಿರುತ್ತೀಯೆಂತಲೂ ನಂಬಿರುತ್ತೇನೆ.

ಮಹಾರಾಜನು ಕಾಲಚೋದಿತನಾದನಿಮಿತ್ತ ರಾಜ್ಯಭಾರವು ಮಹಾರಾಣಿಯಾದ ನಿನ್ನಮೇಲೆ ಬಿದ್ದದ್ದಾಗಿರುತ್ತದೆ. ಪ್ರಜೆಗಳ ಹೃದಯಗಳೇ ನಿನ್ನ ಸಾಮ್ರಾಜ್ಯವು. ಭೊಂಬಾಗಳನ್ನೂ, ಬಾಲಕಿಯರನ್ನೂ, ಊರ್ಮಿಳೆಯರನ್ನೂ ಬಹಳವಾಗಿ ಕೇಳಿದೆನೆಂದು ತಿಳಿಸುವದು ಇಂತಿ ನಿನ್ನ ಸ್ನೇಹಿತೆ

ಸರೋಜಿನ

—ಫ್ರೆಂಚ್ ವೀರಾಂಗನಾ ಜೋ ಆಫ್ ಆರ್ಕ್ ಎಂಬುವಳ ಸ್ಮರಣ ದಿನವು ಬಹಳ ವಿಜೃಂಭಣೆಯಿಂದ ನಡೆಯಿತೆಂತಲೂ ಸುಮಾರು ಮೂರು ಲಕ್ಷದಮೇಲೆ ಜನಗಳ ಪರಿಶೆ ಸೇರಿತ್ತೆಂತಲೂ ಫ್ರಾನ್ಸ್ ದೇಶದ ಮುಖ್ಯ ಮಂತ್ರಿಗಳಾದ ಕ್ಲೆಲೀವ್ ಎಂಬುವರು ಬಹಳ ಆದರದಿಂದ ಹಾರ ತುರಾಯಿಗಳನ್ನು ಅರ್ಪಿಸಿದರೆಂದೂ ತಿಳಿದು ಬರುತ್ತದೆ.

ವರ್ಹಾಡ್ ದೇಶದಲ್ಲಿ ಯಾವ ಸ್ಥಳದಲ್ಲೇ ಆಗಲಿ ಅನಾಥ ಹಿಂದೂ ಸ್ತ್ರೀಯರು, ವಿಧವೆಯರು, ಗಂಡ ಹೆಣ್ಣು ಮಕ್ಕಳು ಸಿಕ್ಕಿದಲ್ಲಿ ಸ್ಥಳದವರು ಅವರನ್ನು ಪೋಷಿಸದೆ ಹೋದಪಕ್ಷ ಕೂಡಲೆ ಅವರನ್ನು ಅಲ್ಲಿ ಆರ್ಯಸಮಾಜದ ಸೆಕ್ರಿಟರಿಯವರಾದ ಪರಮಾನಂದಯಾಭಾಯಿಯವರ ವಶಕ್ಕೆ ತಲಪಿಸಬೇಕು ಹಿಗ್ಗು ಇದನ್ನು ಮರಿಯಕೂಡದು.

—ತಳೆಗಾವ್ ಎಂಬ ಊರಿಗೆ ಸೇರಿದ ದಶಾ ಎಂಬ ಸ್ಥಳದಲ್ಲಿ ಬಜಾರಿನಲ್ಲಿ ವಿಚಾರಣೆಗಿಚ್ಛೆ ಇಲ್ಲದೆ ಪೋಲೀಸಿನವರು ಒಬ್ಬ ದೊಡ್ಡಮನುಷ್ಯನ ಜೋಡಿನಿಂದ ಹೊಡೆದರಂತೆ. ಇಂಥಾದ್ದು ನ್ಯಾಯವಾದರೂ ಹ್ಯಾಗೆ?

—೫ನೆ ತಾರೀಖಿನ ದಿವಸ ನಮ್ಮ ಯುಲಂಡನ್ನಿನಲ್ಲಿ ಚರ್ಚವರ್ತಿಯವರ ಪಡೆದು ಮಾತುಕತೆಗಳನಾಡಿದರು

ವೃತ್ತಾಂತಸಂಗ್ರಹ

—ರಷ್ಯಾ ದೇಶದಲ್ಲಿ ಯುದ್ಧಪ್ರಾರಂಭಕ್ಕೆ ಮುಂಚೆ ೧೬೯೦೦೦೦೦ ಪೌಂಡ್ ನಷ್ಟು ಭಂಗಾಂವೂ ಬ್ರೆಸ್ಟ್ ಲಿಟೋವಸ್ಕ್ ಕರಾರಾದ ನಮಯದಲ್ಲಿ ೧೧೭೦೦೦೦೦ ಪೌಂಡ್ ನಷ್ಟು ಭಂಗಾರವೂ ಇದ್ದಿತೆಂದೂ ೬೦೦೦೦೦೦ ಪೌಂಡ್ ನಷ್ಟು ಕಾಸಾರ್ ನಲ್ಲಿ ಮುಚ್ಚಿಡಲ್ಪಟ್ಟಿತ್ತೆಂದೂ ಹೊರಟ ವರ್ತಮಾನದಮೇಲೆ ರಷ್ಯದ ಸಾಲಗಾರರು ಆ ಹಣ ಈಗ ಏನಾಯಿತೆಂಬುದನ್ನೂ ಎಲ್ಲಿರಬಹುದೆಂಬುದನ್ನೂ ಪತ್ತೆಮಾಡಲುಪಕ್ರಮಿಸಿರುವರು.

—ಹುಗ್ಲಿ-ಚಿಚುರಾ ಮುನಿಸಿಪಾಲಿಟಿಯವರ ಆಡಳಿತದಲ್ಲಿ ನ್ಯೂನಾತಿರಿಕ್ತಗಳೂ ಅನಾನುಕೂಲಗಳೂ ಕೆಚ್ಚಾಗಿರುವುದೆಂದೂ ಭಾವಿಸಿ ಅಲ್ಲಿಯ ಅನೇಕ ನಿವಾಸಿಗಳು ಒಟ್ಟುಗೂಡಿ ಕಂದಾಯ ಕೊಡದೆ ಉಳ್ಳರಹಿಡಿಯಬೇಕೆಂದು ಏರ್ಪಡಿಸುತ್ತಿರುವರು

ಚೀನಾದಲ್ಲಿನ ಷಾಂಗೈ ಪಟ್ಟಣಕ್ಕೆ ಸಹಾಯ ಮಾಡಲು ಹೋಗಿದ್ದ ಅಕಾಲಿ ದಳವು ಬೊಂಬಾಯಿಗೆ ಹಿಂದಿರುಗಿ ಬಂದಿತು. ಅಲ್ಲಿಯ ಸಿಕ್ ಜನರು ಸ್ವಾಗತವನ್ನಿತ್ತರು.

—ಜಿ. ಐ. ಪಿ. ರೈಲ್ವೆ ಕಂಪೆನಿಯ ಆಡಳಿತವನ್ನು ಇಂಡಿಯಾ ಸರ್ಕಾರದವರು ಈ ತಿಂಗಳು ಗುತ್ತಿಗೆ ತಾರೀಖಿನಿಂದ ವಹಿಸಿಕೊಂಡಿರುತ್ತಾರೆ.

—ಅಮೆರಿಕಾದಲ್ಲಿ ಒಬ್ಬ ೩೧ ವರ್ಷ ವಯಸ್ಸಿನ ಸ್ತ್ರೀಯು ೧೨ ತಿಂಗಳುಕಾಲ ನಿದ್ರಿಸಿ ಈಚೆಗೆ ಎಚ್ಚರಗೊಂಡಳಂತೆ ! ಈ ಕಾಲದಲ್ಲೆಲ್ಲಾ ಅವಳಿಗೆ ಆಹಾರವು ರಬ್ಬರ್‌ಕೊಳವೆಗಳ ಮೂಲಕ ಮೂಗಿನ ಮಾರ್ಗವಾಗಿ ಕೊಡಲ್ಪಡುತಿದ್ದಿತು

ಎಡ್ವರ್ಡ್ ಚಕ್ರವರ್ತಿಗೂ ಪ್ರಿನ್ಸ್ ಆಫ್ ವೇಲ್ಸ್ ರಾಗಿದ್ದಾಗ ಜಾರ್ಜ್‌ರವರಿಗೂ ತಲೆಬಾಚುತಿದ್ದ ಮಾಹೆಯಾನ ೨ ಪೌಂ (೩೦ ರೂಪಾಯಿ) ಸಂಬಳ ಪಡೆಯುತಿದ್ದನು. ಇಂತಹವನೂ ಕೂಡ ಈಗ ೫೧೩೨೮೮ ಪೌಂ ಆಸ್ತಿ ಮಾಡಿರುತ್ತಾನೆ.

ದಿವಿ ತಾಲ್ಲೂಕಿನ ಪೇದಕ ಹಳ್ಳಿಯ ಗ್ರಾಮದ ಸಮೀಪದಲ್ಲಿರುವ ಚಿರಸ್ಮೊಲು ಲಂಕೆಯಲ್ಲಿ ಒಬ್ಬ ಮಂಚವು ಸ್ತ್ರೀಗೆ ಒಂದೇ ಸಾರಿ ೩ ಹೆಣ್ಣು ಮಕ್ಕಳೂ ೧ ಗಂಡು ಮಗುವೂ ಹುಟ್ಟಿರುವುದೆಂದೂ ತಾಯಿ ಮಕ್ಕಳೆಲ್ಲರೂ ಕ್ಷೇಮವಾಗಿರುವರೆಂದೂ ಆಶ್ಚರ್ಯಕರವಾದ ವರ್ತಮಾನ ಬಂದಿದೆ.

—ರಾಜಮಹೇಂದ್ರಿಯಲ್ಲಿ ಕಳ್ಳರು ಒಬ್ಬ ವೇಶ್ಯಾಂಗಿಯ ಮನೆಗೆ ನುಗ್ಗಿ ಅವಳನ್ನು ಕೊಂದು ಶವವನ್ನು ಒಂದು ಹಾಸಿಗೆಯಲ್ಲಿ ಸುತ್ತಿಟ್ಟು ಮನೆಯಲ್ಲಿದ್ದ ೨೦ ಸಾವಿರ ರೂಪಾಯಿ ಬೆಲೆಬಾಳುವ ಒಡವೆ ವಸ್ತುಗಳನ್ನು ಸಾಗಿಸಿಕೊಂಡು ಹೋದರು. ೩ ದಿನಗಳ ಮೇಲೆ ಅಕ್ಕಪಕ್ಕದ ಮನೆಯವರು ಶವವನ್ನು ಕಂಡು ಪೋಲೀಸಿನವರಿಗೆ ತಿಳಿಸಿದರು. ತನಿಖೆ ನಡೆಯುತ್ತಿದೆ.

—ಸಿಂಹಳ ದ್ವೀಪದಲ್ಲಿ ಒಬ್ಬ ಸ್ತ್ರೀಯು ಒಂದು ವಿಚಿತ್ರರೂಪವುಳ್ಳ ಮಗುವನ್ನು ಹೆತ್ತಿರುವಳು. ಅದರ ಶರೀರ ಗೂಬೆ ಮತ್ತು ಕಪಿಯಂತಿದ್ದು ಹಣೆ ಮಧ್ಯದಲ್ಲಿ ಒಂದೇ ಕಣ್ಣೂ, ತಲೆಯಮೇಲೆ ಒಂದು ಕೊಂಬೂ, ಬಾಲವೂ ಇರುವುದಂತೆ !

—ಧಾರವಾಡ ಜಿಲ್ಲಾ ನಲವಡಿ ಎಂಬಲ್ಲಿ ಕಳೆದ ೪ನೇ ತಾರೀಖು ಶನಿವಾರ ಸಹಕಾರಿಗಳ ಆನಂದ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು ತಿಳಿಯಬಂದಿದೆ.

ಮಹಾತ್ಮಾ ಗಾಂಧಿಯವರ ಮಗ ಮಣಿಲಾಲ್ ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ಅಸಹಕಾರ ಸತ್ಯಾಗ್ರಹವನ್ನೂ ಪ್ರಾರಂಭಿಸಲುಳ್ಳವರಾಗಿದ್ದಾರೆ.

—ಮೈಸೂರು ನ್ಯಾಯವಿಧಾಯಕಸಭೆಯ ವಿಾಟಿಂಗ್ ಬೆಂಗಳೂರಿನಲ್ಲಿರುವ ಪಬ್ಲಿಕ್ ಆಫೀಸಿನಲ್ಲಿ ೧೯೩೫ನೇ ಇಸವಿ ಆಗಸ್ಟು ೧೧ ನೇ ತಾರೀಖಿನದಿನ ಮಧ್ಯಾಹ್ನ ೧೨ ಘಂಟೆಗೆ ನಡೆಯುವುದು.

—ಮದ್ರಾಸಿನಲ್ಲಿ ೩ನೇ ತಾರೀಖಿನ ದಿವಸ ಒಂದು ವಿಾಟಿಂಗು ನಡೆಯುತ್ತಿದ್ದಾಗ, ಯಾರೋ ತುಂಟರು ಅಲ್ಲಿಗೆ ತುಂಬಾ ಕಲ್ಲು ಎಸೆದು ಅನೇಕರಿಗೆ ಘಾಯವಾಯಿತು. ಕಲ್ಲು ಎಸೆದಾಟ ಹೆಚ್ಚಾಗಲು ವಿಾಟಿಂಗು ಮುಕ್ತಾಯವಾಗಿ ಜನರು ಬೇಗಬೇಗನೆ ಚದುರಿದರು.

—ಕಲ್ಕತ್ತಾದಲ್ಲಿ ಜನಸಂಚಾರಕ್ಕೆ ಬಹಿರಂಗವಾಗಿಲ್ಲದ ಒಂದು ಸಣ್ಣ ರಸ್ತೆಯಲ್ಲಿ ಮಲಗಿದ್ದ ಇಬ್ಬರು ಕೂಲಿಗಳ ಮೇಲೆ ತನ್ನ ಮೋಟಾರನ್ನು ಬಿಟ್ಟು ಸಾಯಿಸಿದ್ದಕ್ಕಾಗಿ ಕಲ್ಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರವರು ಸ್ಮಿತ್ ಎಂಬ ಐರೋಪ್ಯನಿಗೆ ೧ ತಿಂಗಳು ಕಠಿಣ ಸಜವಿತ್ತು ೩೦೦ ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ

—ದೇಶಬಂಧು ದಾಸರ ಸ್ಮಾರಣೆಗಾಗಿ ರಾಜಮಹೇಂದ್ರಿಯಲ್ಲಿ ಒಂದು ಪ್ರಕಟಣೆಮಂದಿರ ಸ್ಥಾಪಿಸಲ್ಪಡುವುದೆಂದೂ, ಜನರು ಧಾರಾಳವಾಗಿ ಚಂದಾಹಣ ಕೂಡಿಸುತ್ತಿರುವರೆಂದೂ ತಿಳಿಯಬಂದಿದೆ.

—ಪ್ರಪಂಚದಲ್ಲೆಲ್ಲಾ ಚತುರಂಗ ಆಟದಲ್ಲಿ ಪ್ರಖ್ಯಾತ ಪ್ರವೀಣನೆನಿಸಿಕೊಂಡಿದ್ದ ಬೋರಿಸ್ ಕೋಸ್‌ಟಿಜ್ ಎಂಬಾತನನ್ನು, ಈಚೆಗೆ ಸಿಂಲಾದಲ್ಲಿ ಪಾಟಿಯಾಲಾ ಮಹಾರಾಜರ ಉದಾರಾಶ್ರಯದಲ್ಲಿ ನಡೆದ ಅಖಿಲ ಭಾರತ ಚತುರಂಗಪಂಥದಲ್ಲಿ ಪೂನಾದ ನಾರಾಯಣ ಜೋಷಿ ಎಂಬುವರು ಸೋಲಿಸಿ ಭಾರತಭೂಮಿಗೇ ಒಂದು ಹೆಮ್ಮೆಯನ್ನು ತಂದಿರುತ್ತಾರೆ.

—ಮೈಸೂರ್ ಬ್ಯಾಂಕಿನ ಮ್ಯಾನೇಜರಾಗಿರತಕ್ಕ ವಿ| ರೋಜ್‌ರವರು ತಾವೇ ಸ್ವತಃ ತಮ್ಮ ಹುದ್ದೆಯನ್ನು ಬಿಟ್ಟುಹೋಗದಿದ್ದಲ್ಲಿ, ಬಲಾತ್ಕಾರದಿಂದ ಅವರನ್ನು ಕೆಲಸದಿಂದ ನಿವೃತ್ತಿಮಾಡಲಾಗುವುದೆಂಬ ವದಂತಿಯಿರುವದಾಗಿ ಸ್ವರಾಜ್ಯ ಪತ್ರಿಕೆಯ ಒಂದು ಬಾತ್ಮಿಯಿಂದ ತಿಳಿಯಬಂದಿದೆ

—ಅಮೃತಸರದಲ್ಲಿ ಒಬ್ಬನು ಮತ್ತೊಬ್ಬನನ್ನು ಗುಂಡಿನಿಂದ ಹೊಡೆದು ಕೊಂದನು. ಕೂಡಲೇ ಪಕ್ಕದಲ್ಲಿದ್ದವನು ಗಾಬರಿಯಿಂದ ತಿಳಿಗೆಬಿದ್ದು ಪ್ರಾಣಬಿಟ್ಟನು !

—ಲಾಹೋರಿನಲ್ಲಿ ರೈಲ್ವೆನೌಕರಿಯಲ್ಲಿದ್ದ ಬದ್ರೀನಾಥ ನೆಂಬುವನಿಗೆ ಖಾಯಿಲೆಬಂದು ಸಾಯುವಸ್ಥಿತಿಯಲ್ಲಿದ್ದನು. ಗಂಡನ ಸಂಕಟವನ್ನು ನೋಡಿಯೂ ಅವನ ಮರಣ ಪ್ರಾಪ್ತಿಯಾಗುತ್ತಿದ್ದುದನ್ನು ತಿಳಿದೂ, ಆತನ ಹೆಂಡತಿಯು ಎತ್ತರವಾದ ತಮ್ಮ ಮನೇ ಮಹಡಿಯ ಮೆಲಿಂದ ಬೀದಿಗೆ ಧುಮಕಿ ಪ್ರಾಣಬಿಟ್ಟಳು. ಆ ಹೊತ್ತಿಗೆ ಗಂಡನ ಪ್ರಾಣವೂ ಹೋಗಲು, ಎರಡು ಶವಗಳನ್ನೂ ಒಟ್ಟಿಗೇ ದಹನಮಾಡಿದರು.

—ಜಿ ಐ.ಪಿ. ರೈಲಿನವರು ರೈಲುಗಾಡಿಗಳೊಂದಿಗೆ ಒಂದೊಂದು ಸಿನಿಮೆಟೋಗ್ರಾಫಿನ ಗಾಡಿಯನ್ನು ಹಾಕುವರೆಂದಾಗಿರುತ್ತಾರೆ. ಅಲ್ಲಿಯ ನೌಕರರು ಯಾವ ರೀತಿಯ ನಡೆವಳಿಕೆಗಳಿಂದಿರಬೇಕೆಂಬುದನ್ನು ಪ್ರದರ್ಶಿಸಲ್ಪಡುತ್ತದೆ.

—ಬಹು ದಪ್ಪನಾಗಿ ಬೆಳೆದಿರುವವರಿಗೆ ಕಂದಾಯ ಹಾಕಬೇಕೆಂದು ಅಮೇರಿಕಾದ ಒಬ್ಬ ಸ್ತ್ರೀ ವೈದ್ಯಳು ಸಲಹೆಕೊಟ್ಟಿರುತ್ತಾಳೆ.

—ಹೈದರಾಬಾದಿನ ನೈಜಾಮರು ಡೆಲ್ಲಿಯಲ್ಲಿ ಪ್ರಕಟವಾಗುವ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯು ತಮ್ಮ ರಾಜ್ಯಕ್ಕೆ ಬಾರದಂತೆ ನಿರೋಧಿಸಿದ್ದಾಗ್ಯೂ, ಆ ಪತ್ರಿಕೆಯಲ್ಲಿ ೨ ದೊಡ್ಡ ಕಲಂಗಳನ್ನು ತುಂಬಾ ಬೆಲೆಗೆ ಪಡೆದು ಪ್ರತಿ ದಿನವೂ ಅದರಲ್ಲಿ ಪ್ರಕಟಣೆಗಳನ್ನು ಜಾಹೀರು ಮಾಡುತ್ತಿರುವರು.

—ಒಬ್ಬ ಇರಾಣಿ ದೊಡ್ಡಮನುಷ್ಯನು ಕೆಲವು ಬೆಲೂಚಿ ಜನಗಳ ಗಡ್ಡ ಮೀಶೆಗಳನ್ನು ತೆಗೆದುಹಾಕಿದ್ದರಿಂದ ಬೆಲೂಚಿ ಜನಗಳು ಇರಾಣ ದೇಶವನ್ನು ನುಗ್ಗಿ ದೊಡ್ಡದೊಂದು ರೈಲ್ವೆ ಸ್ಟೇಷನ್ನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ.

—ಇರಾಕ್ ದೇಶದ ಮಜಲೀ ಸಭೆಯವರು ಲಷ್ಕರೀ ಶಿಕ್ಷಣವನ್ನು ಬಲಾತ್ಕಾರದಿಂದ ಕಲಿಸಬೇಕೆಂದು ವಿಧಾಯಕ ಮಾಡಿರುತ್ತಾರೆ.

—ಜಬ್ಬಲ್‌ಪುರದಲ್ಲಿ ಒಬ್ಬಾತನ ಮಗನಿಗೆ ಖಾಯಿಲೆ ಬರಲು ತಾನೂ ತನ್ನ ಇನ್ನಿಬ್ಬರು ಗಂಡುಮಕ್ಕಳೂ, ಸೊಸೆಯೂ ಸೇರಿ ತನ್ನ ಸ್ವಂತ ಮಗಳನ್ನು ಕಾಳಿಕಾದೇವಿಗೆ ಬಲಿಕೊಟ್ಟದ್ದಕ್ಕಾಗಿ ಅವರ ಮೇಲೆ ಮೊಖದ್ದಮೊ ನಡೆದು, ಜೀವಾವಧಿ ಸಜಾ ವಿಧಿಸಲಾಯಿತು. ಆದರೆ ಮಗನಾದರೂ ಉಳಿದನೆ ! ಮಗನಿಗಾಗಿ ಮಗಳೂ ಆಹುತಿ !!

—ಬೊಂಬಾಯಿನಲ್ಲಿ ಇಬ್ಬರು ಮಾರ್ವಾಡಿಗಳು ತುಂಬ ಹಣದಿಂದ ಕೂಡಿದ ಚೀಲಗಳನ್ನು ತೆಗೆದು ಕೊಂಡುಹೋಗುತಿದ್ದುದನ್ನು ನೋಡಿ ಇಬ್ಬರು ಮುಸಲ್ಮಾನರು ಅವರ ಮೇಲೆ ಬಿದ್ದು ಚೂರಿಗಳಿಂದ ತಿವಿಯಲು ಹಣದ ಚೀಲವನ್ನು ಬಿಟ್ಟು ಬಿಟ್ಟರು. ಈ ದರೋಡೆಕಾರರು ಹೆಣ ತೆಗೆದುಕೊಂಡು ಹೊರಡಲು ಅಷ್ಟು ಹೊತ್ತಿಗೆ ಜನರೂ ಪೋಲೀಸಿನವರೂ ಸೇರಿ ಅವರನ್ನು ದಸ್ತಗಿರಿಮಾಡಿದರು.

ಮಾಧವಾಣಿ ಹತ್ತಿರ ಸೌರಾಟಿನಲ್ಲಿ ೩೦೦ ವರ್ಷಗಳಿಂದಲೂ ವಿವಾಹ ಸಂತೆ ನಡೆಯುತ್ತಿರುವದಂತೆ ! ಸಾವಿರಾರು ಜನ ಬ್ರಾಹ್ಮಣರು ಬಂದು ತಮ್ಮ ಗಂಡು ಅಥವಾ ಹೆಣ್ಣು ಮಕ್ಕಳ ಮದುವೆಗೆ ವಧೂ ವರರನ್ನು ಹುಡುಕಾಯಿಸಿ ಮದುವೆ ನಿಷ್ಕರ್ಷಿಸುತ್ತಿರುವರಂತೆ ! ಮದುವೆ ಏರ್ಪಾಡಿಗೆ ಒಳ್ಳೇ ಉಪಾಯ !

—ಇಂಗ್ಲೆಂಡಿನಿಂದ ನೇಪಾಳಾಕ್ಕೆ ವರ್ಷಂಪ್ರತಿ ೧೦ ಲಕ್ಷ ರೂಪಾಯಿಗಳನ್ನು ಕೊಡುತ್ತಿರುವದು ಇನ್ನೆಷ್ಟು ಕಾಲ ಕೊಡುತ್ತಿರಬೇಕೆಂಬುದು ನಿಷ್ಕರ್ಷೆಯೇ ಇಲ್ಲವಂತೆ.

—ತಿರುಪತಿ ದೇವಸ್ಥಾನದ ಸಾಲಿಯಾನ ಉತ್ಪತ್ತಿ ೧೦ ಲಕ್ಷ ರೂಪಾಯಿಗಳು ಇರುವಂತೆಯೂ ಮತ್ತು ಈ ಉತ್ಪತ್ತಿಯ ಹಣದಲ್ಲಿ ಬನಾರಿಸ್ಸಿನ ಹಿಂದೂ ಯೂನಿವರ್ಸಿಟಿಯ ಮಾದರಿಯಮೇಲೆ ಶ್ರೀ ವೆಂಕಟೇಶ್ವರ ಯೂನಿವರ್ಸಿಟಿಯನ್ನು ಸ್ಥಾಪಿಸುವ ಯೋಚನೆಯಿರುವ ಹಾಗೂ ಪಾಸಗಲ್ ರಾಜರು ಒಂದು ಮಾನಪತ್ರಕ್ಕೆ ಜವಾಬುಕೊಡುವಾಗ ತಿಳಿಸಿರುತ್ತಾರೆ.

—ಕೇಂಬ್ರಿಡ್ಜ್ ಯೂನಿವರ್ಸಿಟಿಯವರು ಲಾರ್ಡ್ ರೀಡಿಂಗರವರಿಗೆ ಡಾಕ್ಟರ್ ಬಿರುದನ್ನು ಕೊಟ್ಟಿರುತ್ತಾರೆ.

—ಗ್ರೇಟ್ ಬ್ರಿಟನ್ ಮತ್ತು ಅಮೇರಿಕಾದಲ್ಲಿ ಉಷ್ಣವು ಪರಾಕಾಷ್ಟತೆಯನ್ನು ಹೊಂದಿದ್ದರಿಂದ ಅನೇಕರು ಮರಣಹೊಂದಿದರು.

—ಪಾಲಿವಾಲಾ ಎಂಬಲ್ಲಿ ನಡೆದ ಅಸ್ಪೃಶ್ಯ ನಿರೋಧ ಸಭೆಯು ಅಲ್ಲಿಯ ವೈದಿಕಮಂಡಲಿಯಲ್ಲಿ ಆಲೋಚನೆ ಹೆಚ್ಚಿಸಿ, ಅವರು ಒಂದು ಪಂಡಿತರ ಸಭೆ ಸೇರಿಸಿ ಈ ವಿಷಯದಲ್ಲಿ ಬಹಳವಾಗಿ ಚರ್ಚೆ ಮಾಡಿ ಕಡೆಗೆ ಅಸ್ಪೃಶ್ಯತೆಯು ಧರ್ಮಶಾಸ್ತ್ರಾಧಾರವಾಹುದೆಂದು ಠರಾವು ಮಾಡಿರುತ್ತಾರೆ. ಕೆಲ ಪಂಡಿತರು ಅಸ್ಪೃಶ್ಯತೆಯ ಪರವಾಗಿ ಮಾತನಾಡಿದರು.

—ತೆಲುಗು ಜನಗಳು ಬಹಳ ಸಾಹಸಿಗಳು ಮತ್ತು ದೇಶ, ಭಾಷಾ ಇವೆರಡರ ವಿಶ್ವಾಸಿಗಳು ಎಂಬುದು ಎಲ್ಲರಿಗೂ ತಿಳಿದ ಅಂಶ. ಆದುದರಿಂದ ಅವರ ದೇಶದಲ್ಲಿ ಒಂದು ವಿಶ್ವವಿದ್ಯಾಲಯವು ಸಾಲದೆ ಎರಡು ಮೂರು ವಿಶ್ವವಿದ್ಯಾಲಯಗಳು ಸ್ಥಾಪಿಸುವ ಭರವಸೆ ಇದೆ. ನಮ್ಮ ಮೈಸೂರಿನಲ್ಲಿ ಒಂದು ವಿಶ್ವವಿದ್ಯಾಲಯವನ್ನು ಎಷ್ಟೋ ಭಯಭೀತಿಯಿಂದ ನಡೆಸುತ್ತಿರಬೇಕಾಗಿದೆ.

—ಗಣೇಶವಾಡಿಯ ವಿದ್ಯಾರ್ಥಿಮಂಡಳಿಯವರು ತಮ್ಮ ಕಸುತ್ತಿನ ಚಮತ್ಕಾರವನ್ನು ಪ್ರದರ್ಶಿಸಿ ಅದರಲ್ಲಿ ಉತ್ಪನ್ನವಾದ ೫೦ ರೂಪಾಯಿಗಳನ್ನು ಅಲ್ಲಿನ ಲೋಕಸೇವಾಸಂಘಕ್ಕೆ ಕೊಟ್ಟರು. ಇದು ಬಹಳ ಸ್ತೋತ್ರಾರ್ಹವಾದುದು.

Mysore Government Aduertisements.

ಮೈಸೂರು ರೈಲ್ವೆಗಳು

ಪ್ರಸಿದ್ಧ ಪತ್ರಿಕೆ

ಮೈಸೂರು ರೈಲ್ವೆ ವರ್ಕ್‌ಷಾಪುಗಳಲ್ಲಿ ಮ್ಯಾಲ್ಡರುಗಳೂ, ಬಾಯಿಲರ್ ಮೇಕರುಗಳೂ, ಇ ಕ್ ಜ ಕ್ ಫಿಟರುಗಳೂ, ಮತ್ತು ರಿವಿಟರುಗಳೂ ಕೆಲಸಕ್ಕೆ ಬೇಕಾಗಿದೆ.

ಇಂಡಿಯನ್ ರೈಲ್ವೆ ವರ್ಕ್‌ಷಾಪುಗಳ ಸಂಪೂರ್ಣಾನುಭವವುಳ್ಳ ಜನರು ಮಾತ್ರವೇ ಸದರಿ ಕೆಲಸಗಳಿಗಾಗಿ—

ಲೋಕೋ ಮತ್ತು ಕ್ಯಾರಿಯೇಜ್
ಸೂಪರಿಂಟೆಂಡೆಂಟ್
ಮೈಸೂರು ರೈಲ್ವೆಗಳು
ಮೈ ಸೂ ರು.

ಎಂಬ ವಿಳಾಸಕ್ಕೆ ಅರ್ಜಿಯೆನ್ನು ಬರೆದುಕೊಳ್ಳಬಹುದಾಗಿದೆ.

MYSORE GOVERNMENT LOAN BONDS & Shares of Prominent Companies

BOUGHT & SOLD

For particulars apply to:—

THE SEMAH ELISHA COMPANY
MYSORE.

TO LET

to

Permanent Advertisers

To Popularise your Business
in the Karnataka Provinces
YOU MUST ADVERTISE IN
the "SATYAVADI"

BECAUSE

It is the cheapest and mostup-to-date Karnatic Weekly
It is read largely and widely
Itis circulated among all grades of persons
It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

RATES of ADVERTISEMENTS ON ENQUIRY

All communications & remittances to be addressed to

The Manager,
SATYAVADI Office,
Mysore, S. India.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ
927 ಚಾಮರಾಜ ಪುರಂ, ಮೈಸೂರು.

The Champion Metropolitan College of Commerce, Economics, Banking, etc.
YELWAL ROAD, MYSORE.
1925--26 Prospectus can be had free at the College or by post on receipt of ½ anna stamp to cover postage (5-6)

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

THE MYSORE PRESS
RAMAVILAS ROAD
MYSORE

We undertake to print
JOBS — BOOKS & PERIODICALS

Neat Workmanship
Moderate Charges
Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ
ಮೈ ಸೂ ರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ವುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—
ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ!!

ಬಿ. ಎಸ್. ಮೂರ್ತಿ, ಬಿ.
ಪ್ರೊಪ್ರೈಟರ್.

Printed and Published by B.S.M
at the Mysore Press, Mysore,
and Proprietor.